## ಬೆಂಕಿಗೆ ನೀರು ಹಾಕಿದಂತೆ...

ನಮ್ಮನೆಯ ಕಿರಿಯ ಸದಸ್ಯ ಅಥರ್ವ ಹೊಸ ಹೊಸ ವಿಚಾರಗಳಿಂದ ಎಲ್ಲರನ್ನೂ ನಗಿಸುತ್ತಿರುತ್ತಾನೆ. ಇತ್ತೀಚೆಗೆ ಅವನಿಗೆ ಜ್ವರ ಬಂದಿತ್ತು. ಯಾವ ಡಾಕ್ಟರ್ ಬಳಿ ಕರೆದುಕೊಂಡು ಹೋಗುವುದೆಂದು ನಾವು ಮಾತಾಡುತ್ತಿರುವಾಗ ಆತ ಹೇಳಿದ, 'ಸುಮ್ನೆ ಯಾಕೆ ಡಾಕ್ಟರ್ ಹತ್ರ ಹೋಗೋದು... ಚೆನ್ನಾಗಿ ನೀರು ಕುಡಿಸಿ ಜ್ವರ ಇಳಿದು ಹೋಗುತ್ತೆ'. ಅದು ಹೇಗೆಂದು ಕೇಳಿದಾಗ, 'ಬೆಂಕಿ ಹತ್ತಿದಾಗ ನೀರು ಹಾಕಿದ್ರೆ ಆರಿ ಹೋಗುತ್ತಲ್ವಾ? ಹಾಗೆ ಹೆಚ್ಚು ನೀರು ಕುಡಿದ್ರೆ ಜ್ವರದ ತಾಪ ಇಳಿದು ಹೋಗುತ್ತೆ' ಎಂದ. ಅವನ ತರ್ಕಕ್ಕೆ ನಾವು ಬೆರಗಾದೆವು.

**ಎಸ್. ಚಂದ್ರಶೇಖರ್ ಸೋಮಯಾಜಿ**



## ಮನೆಯಲ್ಲಿ ಹೀಗಾಗುವುದಿಲ್ಲ

ಕಳೆದ ತಿಂಗಳು ನಾವು ಕುಟುಂಬದವರೆಲ್ಲಾ ಧರ್ಮಸ್ಥಳದ ಪ್ರಕೃತಿ ಚಿಕಿತ್ಸಾಲಯಕ್ಕೆ ಹೋಗಿದ್ದೆವು. ಅಲ್ಲಿ ನಮ್ಮಂತೆಯೇ ಹೇಮಾಕ್ಷಿ ಎನ್ನುವವರು ಬಂದಿದ್ದರು. ಅತ್ಯಂತ ಸರಳ ಹಾಗೂ ಹಾಸ್ಯ ಸ್ವಭಾವದ ಅವರು ಬಹಳ ಬೇಗ ನಮಗೆಲ್ಲಾ ಆತ್ಮೀಯರಾದರು. ಸಕ್ಕರೆ ಕಾಯಿಲೆ ಇರುವ ಹೇಮಾಕ್ಷಿ ಬೆಳಿಗ್ಗೆ ಸಂಜೆ ವೈದ್ಯರು ತಪಾಸಣೆಗೆ ಬಂದಾಗೆಲ್ಲಾ ನೂರೆಂಟು ಪ್ರಶ್ನೆ ಕೇಳಿ ಅವರ ತಲೆ ತಿನ್ನುತ್ತಿದ್ದರು. ಆ ದಿನ ವೈದ್ಯರು ತಪಾಸಣೆ ಮುಗಿಸಿ ಹೋಗುವಾಗ 'ಹೇಮಾಕ್ಷಿ ಅವರೆ ಈ ದಿನ ಯಾವ ಪ್ರಶ್ನೆಯೂ ಬರಲಿಲ್ಲವಲ್ಲ' ಎಂದು ಕೇಳಿದ್ದೇ ತಡ, 'ಡಾಕ್ಟ್ರೇ ಬೆಳಿಗ್ಗೆ ಯೋಗಾಸನ–ಪ್ರಾಣಾಯಾಮ ಮಾಡುವಾಗ ಗಾಢ ನಿದ್ರೆ ಬರುತ್ತಲ್ಲ... ಯಾಕೆ?' ಎಂದರು. ವೈದ್ಯರು 'ಮನೆಯಲ್ಲಿಯೂ ಹೀಗೇ ಆಗುತ್ತಾ?' ಎಂದು ಕೇಳಿದರು. 'ಇಲ್ಲ ಡಾಕ್ಟ್ರೆ... ಮನೆಯಲ್ಲೇನೂ ಹೀಗಾಗಲ್ಲ... ನಾನು ಅಲ್ಲಿ ಯೋಗಾಸನ ಮಾಡೋದೇ ಇಲ್ವಲ್ಲ...' ಎಂದಾಗ ಅಲ್ಲಿದ್ದವರೆಲ್ಲ ನಕ್ಕರು.



**ಶಾಂತಾ ಕೆ.ಪಿ.**